Indian Journal of History and Archaeology

ISSN (E):2582-225X
VOL-1 ISSUE-6, MARCH-APRIL, 2020, 33-41

# ಕೊಳ್ಳೇಗಾಲ ತಾಲೋಕಿನ ಬೌದ್ಧ ನೆಲೆಗಳ ಪ್ರಸ್ತುತತೆ: ಒಂದು ಪರಿವೀಕ್ಷಣೆ

*. ವಿಜಯ.ಜೆ
**. ಡಾ.ಬಿ.ಎನ್.ಯಶೋಧ

***. ವಿಜಯ.ಜೆ**
ಸಂಶೋಧಕರು
ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು.

****. ಡಾ.ಬಿ.ಎನ್.ಯಶೋಧ**
ಪ್ರಾಂಶುಪಾಲರು
ಯುವರಾಜ ಕಾಲೇಜು. ಮೈಸೂರು
ವಿಶ್ವವಿದ್ಯಾನಿಲಯ, ಮೈಸೂರು.

ಭಾರತ ದೇಶ ಹಾಗೂ ಕರ್ನಾಟಕ ರಾಜ್ಯದಲ್ಲಿಯೇ ಕೊಳ್ಳೇಗಾಲ ತಾಲೋಕು ತನ್ನದೇ ಆದಂಥ ಚರಿತ್ರೆ ಮತ್ತು ಸ್ಥಾನವನ್ನು ಪಡೆದುಕೊಂಡಿದೆ. ಇದು ತನ್ನ ಚಾರಿತ್ರಿಕ ಪರಂಪರೆಯ ಜೀವನದಲ್ಲಿ ಎಲ್ಲಾ ರೀತಿಯಲ್ಲಿಯೂ ಧರ್ಮಗಳನ್ನು ಅವಲಂಬಿಸಿಕೊಂಡಿದೆ. ಇದರ ಪ್ರಾಚೀನ ಬೆಳವಣಿಗೆಯನ್ನು ಗಮನಿಸಿದರೆ ವೇದ, ಉಪನಿಷತ್ತುಗಳು, ಆಗಮಸ್ಮೃತಿಗಳ ಇತಿಹಾಸವು ಪುರಾಣಕಾಲದಿಂದಲೂ ಧಾರ್ಮಿಕತೆಯಿಂದ ಬೆಳೆದುಕೊಂಡು ಬಂದಿರುತ್ತವೆ. ಭೌಗೋಳಿಕ ದೃಷ್ಟಿಯಿಂದಲೂ ಕರ್ನಾಟಕದ ದಕ್ಷಿಣದಲ್ಲಿರುವ ಕೊಳ್ಳೇಗಾಲ ತಾಲೋಕು ಉದಾರವಾದ ಪ್ರಕೃತಿಯ ಅನುಕೂಲಗಳನ್ನು ಒದಗಿಸಿ ಎಲ್ಲಾ ಧರ್ಮಗಳನ್ನು ಕೂಡ ಬೆಳೆಸಿರುತ್ತದೆ. ಈ ತಾಲೋಕಿನಲ್ಲಿರುಂಥ ಪ್ರಾಚೀನ ಕಾಲದಲ್ಲಿನ ದೇವಾಲಯಗಳು ಸಾಮಾಜಿಕ ಜೀವನದಲ್ಲಿ ಬಹುಮುಖ್ಯವಾದ ಪಾತ್ರವನ್ನು ವಹಿಸಿದೆ. ಹಾಗೆಯೇ ನೆಲೆಸಿರುವ ಆಯಾ ಭಾಗ'ದ ಜನಸಾಮಾನ್ಯರ ಜೀವನದ ದೈನಂದಿನ ನಂಬಿಕೆಗಳ ಮೂರ್ತರೂಪಕ್ಕೆ ದೇವಾಲಯಗಳು, ಬಸೀದಿಗಳು, ಮಸೀದಿಗಳು, ಬೌದ್ಧವಿಹಾರಗಳು ಮತ್ತು ಧಾರ್ಮಿಕ ಕೇಂದ್ರಗಳಾರುತ್ತವೆ. ಅಂದಿನ ಕಾಲಕ್ಕೆ ದೇವಸ್ಥಾನಗಳಲ್ಲಿ ಪೂಜೆ ಪುರಷ್ಕಾರವಿರಲಿ ಅಥವಾ ಇಲ್ಲದೇ ಇರಲಿ ಅವುಗಳನ್ನು ಸಾರ್ವಜನಿಕರ ತಾಣಗಳೆಂದು ಪರಿಗಣಿಸಲಾಗಿತ್ತು. ದೇವಸ್ಥಾನ ಎಂದ ಕ್ಷಣವೇ ಎಲ್ಲರ ಮನಸ್ಸಿಗೆ ಬರುವುದು ಆಯಾ ತಾಣಗಳ ಜನರ ನಂಬಿಕೆಗಳನ್ನು ಪ್ರತಿನಿಧಿಸುವ ದೇವತಾ ಪ್ರತಿರೂಪವೇ ಪೂಜಾಸ್ಥಾನವೆಂದು ಕಾಣುತ್ತಿದ್ದರು. ದೇವಸ್ಥಾನಗಳನ್ನು ನಿರ್ಮಿಸಬೇಕಾದರೆ ಅನೇಕ ರೀತಿಯ ಪ್ರೇರಣೆಗಳು ಬೇಕು. ಅಂದಿನ ಕಾಲಕ್ಕೆ ಧಾರ್ಮಿಕ ಹಿನ್ನೆಲೆ ಮತ್ತು ನಂಬಿಕೆ ಇವುಗಳ ನಿರ್ಮಾಣಕ್ಕೆ ಚಾಲನೆ ದೊರಕಿತು.

ಪ್ರಾಚೀನ ಕಾಲದಲ್ಲಿ ಆಚಾರದಲ್ಲಿದ್ದ ಮತ್ತು ನಂಬಿಕೆಗಳಾಗಿ ಉಳಿದಿದ್ದ ಪ್ರಾಂತೀಯ ಜಾನಪದ ಹಾಗೂ ಪೌರಾಣಿಕ ಹಿನ್ನಲೆಗಳು ದೇವಾಲಯಗಳ ಬೆಳವಣಿಗೆಗೆ ಪ್ರೇರಣೆ ದೊರೆಯಿತು ಎಂದು ತಿಳಿಯಬಹುದಾಗಿದೆ.

ಕ್ರಿ.ಶ.10 ಮತ್ತು 11ನೇ ಶತಮಾನದಲ್ಲಿ ಹೆಚ್ಚು ಪ್ರವರ್ಧಮಾನಕ್ಕೆ ಬಂದ ವೈದಿಕ ಆಚರಣೆಗಳು ಶೈವ, ವೈಷ್ಣವ, ಜೈನ, ಬೌದ್ಧಧಮ್ಮ ಇನ್ನಿತರ ಧರ್ಮದ ನಂಬಿಕೆಗಳು ಸಹ ದೇವಾಲಯಗಳು, ಬಸೀಗಳು, ವಿಹಾರಗಳ ನಿರ್ಮಾಣಕ್ಕೆ ಹೆಚ್ಚಿನ ರೀತಿಯಲ್ಲಿ ಪ್ರೇರಣೆಯನ್ನೇ ನೀಡಿದ್ದವು. ದೇವಾಲಯಗಳು ಧಾರ್ಮಿಕ ನಂಬಿಕೆಗಳಿಗೆ ಪೂರಕವಾಗಿ ನಿರ್ಮಾಣವಾದಂಥ ವಾಸ್ತು ಕೃತಿ, ದೇವಸ್ಥಾನ ಭೂಮಿಯ ಮೇಲಿನ ಸ್ವರ್ಗದ ಪ್ರತಿರೂಪವಾಗಿ ವೈಕುಂಠ, ಕೈಲಾಸ ಅಥವಾ ಆಯಾ ದೇವಾಲಯಗಳ ವಾಸಸ್ಥಳ ಮತ್ತು ಧಾಮಗಳನ್ನು ಪ್ರತಿನಿಧಿಸುತ್ತದೆ. ಪ್ರಾರಂಭದಲ್ಲಿ ಏಕದೇವತಾರಾಧನೆಗಳಿದ್ದು ಅನಂತರ ಬಹುದೇವತಾರಾಧನೆಗಳಾಗಿ ಮುಂದುವರೆದಿವೆ. ದೇವಸ್ಥಾನಗಳನ್ನು ನಿರ್ಮಾಣ ಮಾಡಿಸುವುದು ಪುಣ್ಯದ ಕೆಲಸವೆಂದು ತಿಳಿಯಲಾಗುತ್ತಿತ್ತು. ದೇವಸ್ಥಾನಕ್ಕೆ ಸಂಬಂಧಿಸಿದಂತೆ ನಿರಂತರ ಚಟುವಟಿಕೆಗಳನ್ನು ನಡೆಸುವುದೋ ಕೂಡ ಅಷ್ಟೇ ಮುಖ್ಯವಾಗಿತ್ತು.

ಒಟ್ಟಾರೆಯಾಗಿ; ಕೊಳ್ಳೇಗಾಲ ತಾಲೋಕಿನಲ್ಲಿರುವಂಥ ಶಾಸನಗಳನ್ನು ಗಮನಿಸಿದಾಗ; ಹಾಗೆಯೇ ಅಲ್ಲಿಕ ನೆಲೆ–ಹಿನ್ನೆಲೆಯನ್ನು ಧಾರ್ಮಿಕ ಹಿನ್ನೆಲೆಯಲ್ಲಿ ಪರಾಮರ್ಶಿಸಿದಾಗ ಈ ತಾಲೋಕಿನ ಆಯಾ ತಾಣಗಳ ಬಹುಮುಖ ವಿವರಗಳು ದೊರೆಯುತ್ತದೆ. ಅದರ ಪ್ರಮುಖವಾಗಿ ವೈದಿಕ ಪರಂಪರೆಯ ಮೌಢ್ಯವನ್ನು ಮತ್ತು ಮನುಷ್ಯ ಮನುಷ್ಯರ ನಡುವೆ ಕಂದಕದ ಸೇತುವೆಯನ್ನು ಕಟ್ಟಿಕೊಡುವ ದೇವರು ದೇವಸ್ಥಾನಗಳ ಬಗೆಗೆಯನ್ನು ಹೊರತು ಪಡಿಸಿ ಈ ಪ್ರಾಂತ್ಯದಲ್ಲಿ ಬೌದ್ಧತತ್ತ್ವವೂ ಪ್ರಭಾವಿತಗೊಂಡಿರುವುದುನ್ನು ಚರ್ಚೆಗೆ ತರಲಾಗಿದೆ. ಈ ತತ್ತ್ವದಿಂದ ಪ್ರಭಾವಿಗೊಂಡಿರುವಂಥ ಜನವರ್ಗವೂ ತಾಲೋಕಿನ ಎರಡು ಸ್ಥಳಗಳಲ್ಲಿ ಬೌದ್ಧ ಸಂಸ್ಕೃತಿಯನ್ನು ಭಿತ್ತಿ ಬೆಳೆಸುತ್ತಿದ್ದಾರೆ. ಅವುಗಳೆಂದರೆ;

1. ಒಡೆಯರ್ ಪಾಳ್ಯದ ಟಿಬೆಟಿಯನ್ ಬೌದ್ಧ ಕೇಂದ್ರ ಮತ್ತು
2. ಚನ್ನಲಿಂಗನಹಳ್ಳಿಯ ಸರಹದ್ದಿನಲ್ಲಿಂಥ ಜೇತವನ ಬೌದ್ಧ ವಿಹಾರ.

**ಒಡೆಯರ್ ಪಾಳ್ಯದ ಟಿಬೆಟಿಯನ್ ಬೌದ್ಧ ಕೇಂದ್ರ**

ಕೊಳ್ಳೇಗಾಲ ತಾಲೋಕಿನ ಒಡೆಯರ್ ಪಾಳ್ಯದ ಹತ್ತಿರ ಟಿಬೆಟಿಯನ್ ಜನ ಸಮುದಾಯದವರು ತಮ್ಮದೇ ಆದಂಥ ಪ್ರತೇಕವಾದ ಬೌದ್ಧ ಕೇಂದ್ರವನ್ನು ಸ್ಥಾಪಿಸಿಕೊಂಡು ಬೌದ್ಧಧಮ್ಮವನ್ನು ಅನುಸರಿಸಿ ಬದುಕುತ್ತಿದ್ದಾರೆ. ಈ ಬದುಕು ಈ ಪ್ರಾಂತ್ಯದ ಹಾಗೂ ಇತರರಿಗೂ ಮಾದರಿಯೇ ಆಗಿದೆ. ಕರ್ನಾಟಕಕ್ಕೆ ಬೌದ್ಧಧರ್ಮದ ಆಗಮನವನ್ನು ಕುರಿತು ಅಧ್ಯಯನವನ್ನು ಮಾಡುವುದಾದರೆ, ಬೌದ್ಧಧರ್ಮದ

ಆಗಮನವನ್ನು ಕುರಿತು ಅತ್ಯಂತ ಪ್ರಾಚೀನ ಉಲ್ಲೇಖವಿರುವುದು ಸಿಲೋನಿನ (ಶ್ರೀಲಂಕಾ)ದ ಇತಿಹಾಸ ಗ್ರಂಥಗಳಾದ ಮಹಾವಂಶದಲ್ಲಿ ಸಿಗುತ್ತದೆ. ಇದರಿಂದ ತಿಳುದು ಬರುವುದೆನೆಂದರೆ; ಕ್ರಿ.ಪೂ. ೩ನೇ ಶತಮಾನದಲ್ಲಿ ಮಹಾನ್ ಬೌದ್ಧಧಮ್ಮ ಪ್ರತಿಪಾದಕರಾದಂಥ ಸಾಮ್ರಾಟ್ ಅಶೋಕ ಧಮ್ಮದ ಪ್ರಸಾರಕ್ಕಾಗಿ ದೇಶ–ವಿದೇಶಗಳಿಗೆ ಪ್ರಚಾರಕನ್ನು ಕಳುಹಿಸಿಕೊಟ್ಟಿದ್ದನು. ಅದರ ಒಂದು ಭಾಗವಾಗಿ ನೋಡುವುದ್ದಾರೆ; ತನ್ನ ಮಕ್ಕಳಾದ ಸಂಘಮಿತ್ರೆ ಮತ್ತು ಮಹೇಂದ್ರನನ್ನು ಸಿಲೋನಿಗೆ ಬೌದ್ಧಧಮ್ಮದ ಪ್ರಚಾರಕ್ಕೆ ಕಳುಹಿಸಿದ್ದನು. ಇದೇ ಅಲ್ಲದೆ ಬೌದ್ಧಬಿಕ್ಕುವಾದಂಥ ಮಹಾದೇವ ಥೇರ ಎಂಬುವವರ'ನ್ನು ಮಹಿಷ ಮಂಡಲ ಮತ್ತು ಬನವಾಸಿ ಕಳುಹಿಸಿದ್ದಾರೆ. ಅಂದರೆ, ಈಗಿನ ಮೈಸೂರು ಪ್ರಾಂತ್ಯಕ್ಕೆ ಕಳುಹಿಸಿದ್ದನು. ಹಾಗೆಯೇ, ಚಿತ್ರದುರ್ಗ, ಬಳ್ಳಾರಿ, ಕೊಪ್ಪಳದಂಥ ಜಿಲ್ಲೆಗಳಲ್ಲಿ ಅಶೋಕನು ತನ್ನ ಆಡಳಿತದ ಕಾಲದಲ್ಲಿ ಬರೆಸಿರುವಂಥ ಅನೇಕ ಸ್ಥಳಗಳಲ್ಲಿ ಹಲವು–ಹತ್ತು ಶಾಸನಗಳು ದೊರೆತಿವೆ. ಈ ಶಾಸನಗಳಲ್ಲಿ ಬೌದ್ಧಧಮ್ಮದ ಪ್ರಸಾರದ ಬಗೆಗೆ ಅಶೋಕನಲ್ಲಿದಂಥ ಕಾಳಜಿಯನ್ನು ಅಪಾರವಾಗಿಯೇ ಪ್ರತಿಬಿಂಬಿಸುತ್ತದೆ. ಇದೇ ಅಲ್ಲದೇ ದೊಡ್ಡಬಳ್ಳಾಪುರ ತಾಲ್ಲೂಕು ರಾಜಘಟ್ಟದಲ್ಲಿ ೨೦೦೧ರಲ್ಲಿ ನಡೆದಂಥ ಉತ್ಖನನದಿಂದ ಬೌದ್ಧ ಚೈತ್ಯಾಲಯದಲ್ಲಿ ಬುದ್ಧನ ಶಿಲ್ಪಗಳು ಹಾಗೂ ಮಣ್ಣಿನ ಸ್ತೂಪಗಳು ದೊರೆತಿವೆ. ಇದರಲ್ಲಿ ಬುದ್ಧನ ಶ್ಲೋಕಗಳು ಕೂಡ ಅಂದಿನ ಜನ ಭಾಷೆಯೇ ಆಗಿದ್ದ ಬ್ರಾಹ್ಮಿ ಲಿಪಿಯಲ್ಲಿದೆ. ಇದು ಕೂಡ ಕರ್ನಾಟಕ ರಾಜ್ಯದಲ್ಲಿ ಬೌದ್ಧಧಮ್ಮದ ಪ್ರಭಾವ ಹಾಗೂ ಅದರ ಅಂಶವನ್ನು ಸೂಚಿಸುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಒಡೆಯರ್ ಪಾಳ್ಯದ ಟಿಬೆಟ್ ಕಾಲೋನಿಯಲ್ಲಿ ಬೌದ್ಧ ದೇವಾಲಯಗಳನ್ನು ಸ್ಥಾಪಿಸಿರುವುದರಿಂದ ಪ್ರಸಿದ್ಧಿಯಾಗಿ ದೇಶ ಹಾಗೂ ವಿದೇಶಗಳಿಂದ ಪ್ರವಾಸಿಗರು ಬರುತ್ತಿದ್ದಾರೆ. ಇಲ್ಲಿ ಒಂದು ಅಥವಾ ಎರಡು ದಿನದವರಗೆ ಪ್ರವಾಸಿಗರು ಉಳಿದುಕೊಳ್ಳಬಹುದಾಗಿದೆ. ಒಡೆಯರ್ ಪಾಳ್ಯ ಮತ್ತು ಬೈಲೂರು ಟಿಬೆಟ್ ಕಾಲೋನಿಗಳು ಈ ಪ್ರಾಂತ್ಯದ ಪ್ರಸ್ತುತ ಬೌದ್ಧರ ಒಂದು ಪ್ರಧಾನ ಪ್ರವಾಸಿ ತಾಣವೆಂದೇ ಪ್ರಖ್ಯಾತಿಯಾಗಿರುತ್ತದೆ. ಬೌದ್ಧ ಅವಲಂಬಿ ಟಿಬೆಟಿಯನ್ನರು ನೆಲೆಸಿರುವ ಈ ತಾಣವೂ ಪೂರ್ವಘಟ್ಟದ ಪರ್ವತ ಶ್ರೇಣಿಗಳಿಂದ ಸುತ್ತಲೂ ಸುತ್ತುವರೆದಿದ್ದು, ದಟ್ಟವಾದ ಕಾಡುಗಳಿದ್ದು, ವನ್ಯಜೀವಿಗಳ ಆಶ್ರಯ ಪಡೆದ ತಾಣವೂ ಸಹ ಆಗಿದೆ. ಅದು ಅಲ್ಲದೇ ಈ ಪರ್ವತ ಶ್ರೇಣಿಯಿರುವುದರಿಂದಲೇ ಕಾಲಕಾಲಕ್ಕೆ ಮಳೆಯನ್ನು ತಂದು ಇಲ್ಲಿನ ಶ್ರೀಮಂತ ಪರಿಸರಕ್ಕೆ ಕಾರಣೀಭೂತವಾಗಿದೆ. ಕೊಳ್ಳೇಗಾಲ ಪ್ರಾಂತ್ಯದ ಸ್ಥಳೀಯರೇ ಹೇಳುವಂತೆ ಟಿಬೆಟಿಯನ್ನರಿಗೆ ನೀಡಲಾಗಿರುವ ಭೂಮಿ ಉತ್ಕೃಷ್ಟವಾಗಿದ್ದು, ಅರೆಮಲೆನಾಡು ಎಂದು ಕರೆಸಿಕೊಳ್ಳುವಷ್ಟು ಫಲವತ್ತಾದ ಕೃಷಿಯೋಗ್ಯ ಭೂಮಿಯನ್ನು ಹೊಂದಿದ್ದಾರೆ. ಮೊದಲ ನೋಟಕ್ಕೆ ಇಡೀ ಪ್ರದೇಶ ನೀಲಗಿರಿ (ಊಟಿ) ಬೆಟ್ಟದ ಸಾಲುಗಳನ್ನು ನೆನಪಿಗೆ ತರುತ್ತದೆ. ಅಲ್ಲದೇ ಇಲ್ಲಿ ದೊರೆಯುವ ಶ್ರೀಗಂಧ, ಬೀಟೆ, ತೇಗ, ಬಿದಿರು ಇನ್ನಿತರ ಮರ ಗಿಡ ಸಸ್ಯವರ್ಗಗಳಿಂದ ಆವೃತ್ತವಾಗಿ ನೋಡುಗರ

ಮನಸ್ಸನ್ನು ಹೆಚ್ಚಿನ ರೀತಿಯಲ್ಲಿ ಆಕರ್ಷಿಸುತ್ತದೆ. ಇಂಥ ಭೂಪ್ರದೇಶದಲ್ಲಿ ಬಯಲಲ್ಲಿ ಟಿಬೆಟಿಯನ್ನರು ಪುಟ್ಟ ಪುಟ್ಟ ಕಾಲೋನಿಗಳು, ಅಲ್ಲಲ್ಲಿ ಗುಂಪು ಗುಂಪಾಗಿ ನಿರ್ಮಾಣಗೊಂಡಿರುವುದನ್ನು ಕಾಣಬಹುದು. ಒಡೆಯರ್ ಪಾಳ್ಯದಿಂದ ಹಾಗೂ ಪಿ.ಜಿ.ಪಾಳ್ಯ ಈ ಎರಡು ಕಡೆಯಿಂದ ಪ್ರಯಾಣಿಸಿದರೆ ಎದುರಾಗುವ ನೆಲೆಯೇ, ತಾಣವೇ ಟಿಬೆಟಿಯನ್ ಕ್ಯಾಂಪ್ ಅಥವಾ ಕಾಲೋನಿಗಳು. ಈ ಭೂಪ್ರದೇಶವನ್ನು ಭಾರತ ಸರ್ಕಾರ 1973ರಲ್ಲಿ ಟಿಬೆಟಿಯನ್ ನಿರಾಶ್ರಿತರಿಗೆ ನೀಡಿತ್ತು. ಭಾರತದ ಮೊದಲನೆಯ ಪ್ರಧಾನ ಮಂತ್ರಿಯಾದಂಥ ಪಂಡಿತ್ ಜವಾಹರ್‌ಲಾಲ್ ನೆಹರು ಮತ್ತು ಅಂದಿನ ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರು ಈ ಭೂಪ್ರದೇಶವನ್ನು ಗುರುತು ಮಾಡಿಸಿ ನೀಡಿದರು. ಈ ಪ್ರದೇಶದಲ್ಲಿ ಅಂದರೆ, 1973–74ರಲ್ಲಿ ಕರ್ನಾಟಕದ ವಿವಿಧ ಭಾಗಗಳಲ್ಲಿ ನಾಲ್ಕು ಮುಖ್ಯ ದೊಡ್ಡ ಕ್ಯಾಂಪ್‌ಗಳು ತಲೆ ಎತ್ತಿದವು. ಅವುಗಳೆಂದರೆ,

1. ಬೈಲುಕುಪ್ಪೆ ಹಳೆಯದು
2. ಬೈಲುಕುಪ್ಪೆ ಹೊಸದು (ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲ್ಲೂಕು)
3. ಮುಂಡಗೋಡು (ದಕ್ಷಿಣ ಕನ್ನಡ ಜಿಲ್ಲೆ)
4. ಒಡೆಯರ್ ಪಾಳ್ಯ (ಈಗಿನ ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು)

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು ಒಡೆಯರ ಪಾಳ್ಯ ಟಿಬೆಟಿಯನ್ ಕ್ಯಾಂಪ್‌ಗೆ ಮಾತ್ರ ಸೀಮಿತಗೊಳಿಸಲಾಗಿದೆ. 1973ರಲ್ಲಿ ಮೊಟ್ಟ ಮೊದಲ ಬಾರಿಗೆ ಇಲ್ಲಿಗೆ 1000 ರಿಂದ 1500 ಜನ ಬಂದು ನೆಲೆಸಿದರು. ಈ ಹಿಂದೆ ನೇರವಾಗಿ ಇಲ್ಲಿಗೆ ಟಿಬೆಟ್‌ನಿಂದ ಬಂದಾಗ ದಟ್ಟವಾದ ಕಾಡು ಯಾವುದೇ ತರಹದ ಸೌಕರ್ಯಗಳು ಇರಲಿಲ್ಲ. ಒಡೆಯರ ಪಾಳ್ಯದ ಟಿಬೆಟಿಯನ್ ಕ್ಯಾಂಪ್ 25 ಗ್ರಾಮಗಳ ಪುಟ್ಟ ಪುಟ್ಟ ನಿರಾಶ್ರಿತರ ತಾಣವೇ ಆಗಿದೆ. ಇಲ್ಲಿ ಪ್ರತಿಯೊಂದು ಗ್ರಾಮಕ್ಕೂ ಎ.ಬಿ.ಸಿ.ಡಿ ಹೀಗೆ ಹೆಸರು ಕೊಟ್ಟಿದ್ದಾರೆ. ಯಾವ ನಿರ್ದಿಷ್ಟವಾದ ಹೆಸರನ್ನು ಕೊಡದೇ ಎ.ಬಿ ಗ್ರಾಮ ಎಂದು ಹೆಸರು ಇಟ್ಟುಕೊಂಡಿದ್ದಾರೆ ಎಂಬುದು ಕುತೂಹಲಕಾರಿಯಾದ ಸಂಗತಿಯಾಗಿದೆ. ಒಂದೊಂದು ಗ್ರಾಮದಲ್ಲೂ 25 ರಿಂದ 30 ಕುಟುಂಬಗಳು ವಾಸಿಸುತ್ತಿದ್ದಾರೆ. ಒಂದೊಂದು ಗ್ರಾಮಕ್ಕೆ ಒಬ್ಬೊಬ್ಬ ಗ್ರಾಮದ ಮುಖಂಡನಿರುತ್ತಾನೆ. ಇವರು ವಾರಕ್ಕೆ ಒಂದು ಸಾರಿ ಸಭೆ ಸೇರಿ ತಮ್ಮ ಕುಂದುಕೊರತೆಗಳನ್ನು ಮುಕ್ತವಾಗಿ ಚರ್ಚಿಸಿ ಬಗೆಹರಿಸಿಕೊಳ್ಳುತ್ತಾರೆ. ಇಲ್ಲಿನ ಮನೆಗಳು ಸ್ವಿಟ್ಜರ್‌ಲ್ಯಾಂಡ್ ದೇಶದ ಮಾದರಿಯಲ್ಲಿ ರಚಿತಗೊಂಡಿರುತ್ತವೆ. ಮನೆಯ ಸುತ್ತಲೂ ಬೌದ್ಧಧರ್ಮದ ಮಂತ್ರಗಳನ್ನೊಳಗೊಂಡ ಓಂ ಮಣಿಪದ್ಮಹೂಂ ಓಂ ಮನಿಪೆಮನಿ ಹೂಂ ಎಂಬ ಅಕ್ಷರದ ಬಂಟಿಂಗ್ಸ್ ಇರುತ್ತದೆ. ಅಲ್ಲದೇ ಪ್ರತಿ ಗ್ರಾ್ರಮಕ್ಕೂ ಒಂದೊಂದು ಬೌದ್ಧ ದೇವಾಲಯ ಇರುತ್ತದೆ. ಇಲ್ಲಿನ 22 ಗ್ರಾಮಗಳು ಮತ್ತು ಕುಟುಂಬಗಳು ಸ್ವಚ್ಛತೆಗೆ ಆದ್ಯತೆ ನೀಡಿರುವುದು ಕಾಣಬರುತ್ತದೆ.

೧೯೫೯ರಲ್ಲಿ ಟಿಬೆಟ್‌ನಿಂದ ಸ್ವಯಂ ಗಡಿಪಾರು ಮಾಡಿಕೊಂಡು ಬಂದಂಥ ಬೌದ್ಧಬಿಕ್ಕು ದಲೈಲಾಮ ಇವರ ಪರಮೋಚ್ಚಗುರು, ಇವರು ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ ಗಡಿಪಾರಾದ ಟಿಬೆಟಿಯನ್ ಸರ್ಕಾರವನ್ನು ಸ್ಥಾಪಿಸಿದ್ದಾರೆ. ಚೆನ್ರಿಸಿಗ್ ಇವರ ಪರಮದೈವ, ಇವರ ಅವತಾರವೇ ದಲೈಲಾಮ ಎಂಬ ನಂಬಿಕೆ ಈ ಜನವರ್ಗಕ್ಕೆ ಇದೆ. ಸಾಮಾಜಿಕವಾಗಿ ಇವರು ಈಗಲೂ ಟಿಬೆಟ್‌ನ ಕಟ್ಟಾ ಅನುಯಾಯಿಗಳು, ತಮ್ಮದೇ ವಿಶಿಷ್ಟ ರೀತಿಯ ಸಂಪ್ರದಾಯ, ಆಚರಣೆಯನ್ನು ರೂಢಿಸಿಕೊಂಡು ತಮ್ಮ ಜೀವನ ನಡೆಸುತ್ತಿದ್ದಾರೆ. ಟಿಬೆಟಿಯನ್ನರು ಮೊದಲಿಗೆ ಆಧುನಿಕ ಶಿಕ್ಷಣ ಕಲಿಯಲು ಉತ್ಸುಕರಾಗಿರಲಿಲ್ಲ. ಕಾರಣವೇನೆಂದರೆ, ತಮ್ಮ ಮೂಲ ಸಂಸ್ಕೃತಿಗೆ, ಪರಂಪರೆಗೆ ಧಕ್ಕೆ ಆಗುತ್ತದೆ ಎಂದು ತಿಳಿದಿದ್ದರು. ಆದರೆ ಆಧುನಿಕ ಕಾಲಘಟ್ಟದಲ್ಲಿ ಹೊಸ ರೀತಿಯ ಶಿಕ್ಷಣ ಪಡೆಯುತ್ತಿದ್ದಾರೆ. ಇವರ ಧಾರ್ಮಿಕ ವಿಧಿ-ವಿಧಾನಗಳನ್ನೊಳಗೊಂಡಂತೆ ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಕಡ್ಡಾಯವಾಗಿ ಟಿಬೆಟಿಯನ್ ಭಾಷೆ ಕಲಿಸುತ್ತಾರೆ. ಆರನೇ ತರಗತಿಯಿಂದ ಉನ್ನತ ವ್ಯಾಸಂಗದವರೆಗೂ ಟಿಬೆಟಿಯನ್ ಅನ್ನು ಒಂದು ವಿಷಯವಾಗಿ ಅಧ್ಯಯನ ಮಾಡಬಹುದು. ಒಡೆಯರ ಪಾಳ್ಯದ ಬೈಲೂರಿನಲ್ಲಿ ಕೇಂದ್ರೀಯ ವಿಶ್ವವಿದ್ಯಾನಿಲಯ ಸುಮಾರು ೧೦೦೦ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತದೆ. ೪೦ ಜನ ಬೋಧಕ, ಬೋಧಕೇತರ ಸಿಬ್ಬಂದಿಯಿದ್ದು, ಉತ್ತಮ ದರ್ಜೆಯ ವಿಜ್ಞಾನ ಪ್ರಯೋಗಾಲಯ, ವಿಶಾಲವಾದ ಮೈದಾನ, ಕ್ರೀಡಾ ಸಾಮಾಗ್ರಿ, ಮಧ್ಯಾಹ್ನದ ಬಿಸಿಯೂಟ, ನೃತ್ಯ ಕೊಠಡಿಗಳು, ಹೊಲಿಗೆ ಯಂತ್ರದ ತರಬೇತಿ ಇತ್ಯಾದಿ ಎಲ್ಲಾ ಬಗೆಯಲ್ಲಿನ ಸವಲತ್ತುಗಳನ್ನು ಒಳಗೊಂಡಿದೆ.

**ಟಿಬೆಟಿಯನ್ನರ ಧಾರ್ಮಿಕ ಆಚರಣೆ**ಯನ್ನು ಅಲೋಕಿಸಿದಾಗ; ಈ ಜನವರ್ಗವು ಕ್ರಿ.ಶ.7ನೇ ಶತಮಾನದ ಅನಂತರ ಸಂಪೂರ್ಣ ಬೌದ್ಧ ಧರ್ಮೀಯರಾಗಿ ಮಾರ್ಪಾಟು ಹೊಂದಿದ್ದಾರೆ. ಧಾರ್ಮಿಕ ಗ್ರಂಥ ಬುದ್ಧಿಸ್ಟ್, ಒಂದೊಂದು ಓಲೆಗರಿ ಗ್ರಂಥವಾಗಿದ್ದು, ಇಲ್ಲಿ ಉಲೇಖವಾದಂಥ ಧಾರ್ಮಿಕ ವಿಧಿ-ವಿಧಾನಗಳನ್ನು ಗ್ರಹಗತಿಗಳೊಂದಿಗೆ ಹೋಲಿಸಿ ಅಲ್ಲಿನ ಲಾಮಗಳು ಪ್ರವಚನವನ್ನು ನೀಡುತ್ತಾರೆ. ಇದೇ ಅಲ್ಲದೇ ಹಬ್ಬಗಳು, ಮದುವೆ ದಿನಾಂಕ ನಿಗಧಿ, ಪ್ರತಿದಿನ ಪ್ರಾರ್ಥನೆ, ಮಣಿಜಪ ಮೊದಲಾದವುಗಳನ್ನು ಕಡ್ಡಾಯವಾಗಿಯೇ ಅನುಸರಿಸುತ್ತಾ ಬಂದಿರುತ್ತಾರೆ. ಇವರು ಬೌದ್ಧತತ್ತ್ವದಲ್ಲಿರುವಂಥ ಶಾಂತಿ, ಸಹನೆ, ಅಹಿಂಸೆ, ಸೌಹಾರ್ದ ಮನೋಭಾವನೆಯಂಥ ತೆರೆನಾಗಿರುವ ವಿಚಾರಗಳಿಗೆ ಹೆಚ್ಚು ಒತ್ತು ನೀಡುತ್ತಾರೆ. ಬೌದ್ಧ ದೇವಾಲಯವನ್ನು ಈ ಟಿಬೆಟಿಯನ್ನರು 'ಗೊಂಪಾ' ಎಂದು ಕರೆಯುತ್ತಾರೆ. ಬುದ್ಧ ಇವರ ಅರಾಧ್ಯ ದೈವ. ಭಿನ್ನವಾದ ಬೌದ್ಧ ದೇವಾಲಯಗಳನ್ನು ಕಟ್ಟಿಸಿ ಅಲ್ಲಿ ಬೌದ್ಧ ಪರಂಪರೆಯನ್ನು ಸಾರುವ ಸಂದೇಶ ಒಳಗೊಂಡಿರುತ್ತದೆ. ದೇವಾಲಯದ ಗೋಡೆಗಳಲ್ಲಿ ಸಾಮಾನ್ಯವಾಗಿ ಶಾಂತಿ, ಚಕ್ರ, ಪದ್ಮ, ಮೀನು ಇರುತ್ತದೆ. ಅಹಿಂಸಾ ಪರಮೋಧರ್ಮ ಎಂಬ ಧ್ಯೇಯ ವಾಕ್ಯವನ್ನೊಳಗೊಂಡಿರುತ್ತದೆ. ಇದನ್ನು ಟಿಬೆಟಿಯನ್ ಭಾಷೆಯಲ್ಲಿ **ಸಿದೆ**

ಎನ್ನುತ್ತಾರೆ. ಸರ್ವೇಸಾಮಾನ್ಯವಾಗಿ ಟಿಬೆಟಿಯನ್ನರು ಔಟಚಿಟಿಜ ಙಚಿಷ್ಜು ಊಣಾ (ಓಂಮನಿಪೆಮಾನಿ) ಹ್ನ್ಲಾಂ ಎಂಬ ಮಂತ್ರವನ್ನು ಉಚ್ಛಾರ ಮಾಡುತ್ತಾರೆ. ಓಂ ಎಂದರೆ; ಆರಂಭಿಕ ಭೀಜಾಕ್ಷರ ಮಂತ್ರ ಅಥವಾ ಟೆಕ್ನಿಕಲ್ ಸೌಂಡ್ ಎಂಬರ್ಥದಲ್ಲೂ, ಮನಿ ಎಂದರೆ ಇದೊಂದು ಮಣಿ ಅಥವಾ ಹರಳು ಸಂಜೀವಿನಿ ಮಣಿ, ಇದನ್ನು ಜೆಮ್ಸ್ ಎನ್ನುವರು. ಪೆಮಾನಿ ಎಂದರೆ ತಾವರೆ ಹೂ ಎಂದರೆ ನಿನ್ನ ಪಾದಕ್ಕೆ ಶರಣು ಅಥವಾ ಸರ್ವಸಮರ್ಪಣಾಭಾವ ಎಂದು ತಿಳಿದುಬರುತ್ತದೆ. **ಗೊಂಪಾ**: ಇವರ ಗೊಂಪಾ ಹಾಗೂ ಹಳ್ಳಿಗಳ ಸುತ್ತ ಸಾಮಾನ್ಯವಾಗಿ ಐದು ಬಗೆಯ ಬಣ್ಣಗಳನ್ನು ಒಳಗೊಂಡ ವಿವಿಧ ಬಗೆಯ ಬಂಟಿಂಗ್ಸ್ ಕಂಡುಬರುತ್ತದೆ. ಅಲ್ಲದೇ, ಗೊಂಪಾಗಳ ಮುಂಭಾಗ ಐದು ಬಣ್ಣಗಳ ಬಟ್ಟೆ ಮತ್ತು ಕಳಸಗಳಲ್ಲಿ ಈ ಬಟ್ಟೆಗಳಿಂದ ಅಲಂಕರಿಸಿರುತ್ತಾರೆ. ಅವು ನೀಲಿ ಬಣ್ಣ ಆಕಾಶವನ್ನು ಬಿಳುಪು ಮೋಡವನ್ನು ಕೆಂಪು, ಬೆಳಕು, ಹಸಿರು ಸಮೃದ್ಧಿಯನ್ನು ಅಥವಾ ಹಸಿರೀಕರಣ, ಹಳದಿ ಮಣ್ಣನ್ನು ತಿಳಿಸುತ್ತದೆ. ಗೊಂಪಾಗಳಿಗೆ ಒಬ್ಬೊಬ್ಬ ಲಾಮ ಮುಖ್ಯಸ್ಥರು, ಇವರು ಬ್ರಹ್ಮಚಾರಿಗಳು ಟಿಬೆಟಿಯನ್ನರ ಎಲ್ಲಾ ರೀತಿಯ ಹಬ್ಬ ಮದುವೆ, ಶುಭಕಾರ್ಯಕ್ಕೆ ಇವರನ್ನು ಕರೆಯುತ್ತಾರೆ. ಇದಕ್ಕೆ ತಮಗೆ ಹತ್ತಿರ ಇರುವ ಗೊಂಪಾ ಮುಖ್ಯಸ್ಥರನ್ನು ಕರೆಯುವುದು ವಾಡಿಕೆ.

**ಬೌದ್ಧದೇವಾಲಯಗಳು**: ಬೈಲೂರಿನಲ್ಲಿ ಬೌದ್ಧ ದೇವಾಲಯಕ್ಕೆ ಸ್ಥೂಪ ಎನ್ನುವರು. ಈ ಬೌದ್ಧಸ್ಥೂಪದ ಮಾದರಿ ವಿಶಿಷ್ಟತೆಯಿಂದ ಕೂಡಿರುತ್ತದೆ. ಚೌಕಕಾರದ ದಪ್ಪ ಮೈಯಿಂದ ಕೂಡಿದ 8 ರಿಂದ 10 ಅಡಿ ಎತ್ತರದ ಕಟ್ಟಡ ಹಂತಹಂತವಾಗಿ ನಿರ್ಮಿತವಾಗಿರುತ್ತದೆ. ಇವರ ಮೇಲೆ ಬುದ್ಧನಮೂರ್ತಿ ಇರುತ್ತದೆ. ಇದು ಧ್ಯಾನಸ್ಥ ಸ್ಥಿತಿಯಲ್ಲಿ ಕುಳಿತಿರುವಂತೆ ಇರುತ್ತದೆ. ಅದರ ಮೇಲೆ ಕೊಳವೆ ಆಕಾರದ ಕಂಬ ವಿರುತ್ತದೆ. ಈ ಕಂಬದ ಮೇಲೆ ವಿಶಾಲವಾದ ಛಾವಣಿ ಇದ್ದು, ನಾಲ್ಕು ಮೂಲೆಗಳಲ್ಲಿ ವಿಶಿಷ್ಟ ರಚನೆಯ ಪ್ರಾಣಿಮುಖದ ಸಂಕೀರ್ಣ ರಚನೆ ಇರುತ್ತದೆ. ಆನೆಯ ಸೊಂಡಿಲು, ನವಿಲು ಕಣ್ಣು, ಮೊಸಳೆ ಹಲ್ಲು, ಇತ್ಯಾದಿ ಕಂಬದ ಮಧ್ಯದಲ್ಲಿ ವೃತ್ತಕಾರದ ಟಿಬೆಟಿಯನ್ ಭಾಷೆಯ ಮಂತ್ರಾಕ್ಷರ ಇರುತ್ತದೆ. ಸ್ಥೂಪದ ಮುಂಭಾಗದಲ್ಲಿ ಸ್ಥೂಪ ಕಂಬವಿದ್ದು, ಈ ಕಂಬಕ್ಕೆ ಹಸಿರು ಬಣ್ಣದ ಧ್ವಜ ಅಲಂಕರಿಸಿದ್ದಾರೆ. ಮೇಲೆ ಐದು ಬಣ್ಣದ ಬಟ್ಟೆಯ ಅಲಂಕಾರ ಅದರ ಮೇಲೆ ಕಳಸ, ಬೌದ್ಧ ಸ್ಥೂಪದ ಕೊನೆ ಮೂಟೆಯಲ್ಲಿ ಧೂಪ ಸ್ತಂಭವಿರುತ್ತದೆ. ಅಲ್ಲದೆ ಇಲ್ಲಿ ಭಕ್ತಿಧ್ಯಾನ ಹಾಗೂ ಪ್ರವೇಶಿಸುವ ಪ್ರತಿಯೊಬ್ಬರಿಗೂ ಸದ್ಭಾವನೆಯ ಭಾವ ಮೂಡುವಂತಿರುತ್ತದೆ. ತಮ್ಮ ಹೊಲಗಳಲ್ಲಿಯೂ ಕೂಡ ಕಲ್ಲಿನಿಂದಲೇ ಸ್ಥೂಪ ನಿರ್ಮಿಸಿಕೊಂಡಿರುತ್ತಾರೆ. ಇದಕ್ಕೆ ಅವರು ಚೂತಿನ್ ಎಂಬ ಹೆಸರಿನಿಂದ ಕರೆಯುತ್ತಾರೆ.

ಬೈಲೂರು ತಾಣದಲ್ಲಿರುವ ದೊಡ್ಡ ದೇವಾಲಯವನ್ನು 10 ಜನವರಿ 1992ರಲ್ಲಿ ದಲೈಲಾಮ ಅವರು ಉದ್ಘಾಟಿಸಿದ್ದಾರೆ. ದಲೈಲಾಮ ಅವರು ಇಲ್ಲಿಗೆ 4 ರಿಂದ 5 ಬಾರಿ ಬಂದಿರುವುದಾಗಿ ತಿಳಿದುಬರುತ್ತದೆ. ಟಿಬೆಟಿಯನ್ನರಿಗೆ ಆರೋಗ್ಯ ಕೇಂದ್ರ, ಕೇಂದ್ರ ವಿದ್ಯಾಲಯ ಇವರಿಗೆ ಪ್ರಧಾನ ಕಛೇರಿ ಇದೆ. ಅಲ್ಲದೇ,

ನವದೆಹಲಿಯಿಂದ ಇವರಿಗೆ ಕೂಡು ಕೊರತೆ ಬಗೆಗೆ ಮಾಹಿತಿ ಇದೆ. ಇದೊಂದು ಬೌದ್ಧರ ಒಂದು ನೆಲೆಯಾಗಿಯೇ ಕರ್ನಾಟಕ ರಾಜ್ಯದಲ್ಲಿಯೇ ಗುರುತಿಸಿಕೊಂಡಿರುತ್ತದೆ. ಇಲ್ಲಿಯ ಸ್ಥಳೀಯರೊಂದಿಗೆ ಪ್ರೀತಿಪೂರ್ವಕವಾಗಿ ಈ ಟಿಬೆಟಿಯನ್ ಸಮುದಾಯದವರು ನೆಲೆಸುವ ಮುಖೇನ ತಮ್ಮ ತಮ್ಮ ಬದುಕನ್ನು ಕಟ್ಟಿಕೊಟ್ಟಿದ್ದಾರೆ.

**ಚನ್ನಲಿಂಗನಹಳ್ಳಿಯ ಹತ್ತಿರ ಸ್ಥಾಪಿತಗೊಂಡಿರುವ ಜೇತವನ ಬೌದ್ಧವಿಹಾರ**

ಕೊಳ್ಳೇಗಾಲ ತಾಲ್ಲೂಕಿನ ಚನ್ನಾಲಿಂಗನಹಳ್ಳಿಯ ಹತ್ತಿರ ಜೇತವನ ಬೌದ್ಧವಿಹಾರವು ಸ್ಥಾಪನೆಗೊಂಡಿದೆ. ಬೌದ್ಧಧಮ್ಮವು ವಿಶ್ವ ವ್ಯಾಪಿಯಾಗಬೇಕು ಎಂಬ ಗುರುಬುದ್ಧನ ಕನಸು ನನಸಾಗಿಸುವ ಕೆಲಸ ಈ ನೆಲದಲ್ಲಿ ನಡೆದಿದೆ. ಕೊಳ್ಳೇಗಾಲ ತಾಲ್ಲೂಕಿನಿಂದ ಹಾದುಹೋಗುವ ಸತ್ಯಮಂಗಲ ರಸ್ತೆಯಲ್ಲಿ ಸುಮಾರು 14 ಕಿಲೋಮೀಟರ್ ದೂರದಲ್ಲಿ ಈ ಜೇತವನ ಬೌದ್ಧ ವಿಹಾರ ಪ್ರಸಿದ್ಧಿಯಾಗಿದೆ. ಈ ಬೌದ್ಧವಿಹಾರದ ಸ್ಥಾಪನೆಗೆ ಮೊದಲು ಅಸ್ತಿಭಾರವನ್ನು ಹಾಕಿದವರು ತಿ.ನರಸೀಪುರ ತಾಲ್ಲೂಕಿನ ಕೊಳತ್ತೂರು ಗ್ರಾಮದ ಪ್ರೊ.ಎಂ.ಮರಿಸ್ವಾಮಿ ಎಂಬವರು. ಇವರು ಮೂಲತಃ ಶಿಕ್ಷಕರಾಗಿ ಸರ್ಕಾರಿ ಸೇವೆಯಲ್ಲಿದ್ದವರು. ಅನಂತರ ಆ ಕೆಲಸಕ್ಕೆ ಸ್ವಯಂ ರಾಜೀನಾಮೆ ನೀಡಿ ಭಾರತೀಯ ನೆಲದ ದಮನಿತ ವಿಮೋಚನಾ ಧ್ವನಿಯಾಗಿರುವಂಥ ಬೋಧಿಸತ್ತ್ವ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು ಬೌದ್ಧಧಮ್ಮವನ್ನು 1956ನೇ ಅಕ್ಟೋಬರ್ 14ರಂದು ಸ್ವೀಕರಿಸಿದ ನಾಗಪುರದ **ದೀಕ್ಷಾಭೂಮಿ**ಯಲ್ಲಿ ಬೌದ್ಧಧರ್ಮವನ್ನು ಸ್ವೀಕರಿಸಿದರು. ಅನಂತರದಲ್ಲಿ ಧಮ್ಮ ಪ್ರಚಾರಕ್ಕಾಗಿ ಕೊಳ್ಳೇಗಾಲ ತಾಲೋಕನ್ನು ಆಯ್ಕೆಮಾಡಿಕೊಂಡು ಅಲ್ಲಿನ ಚನ್ನಲಿಂಗನಹಳ್ಳಿ ಗ್ರಾಮದ ಹತ್ತಿರಲ್ಲಿನ ಒಂದು ಭೂಮಿಯಲ್ಲಿ ಬೌದ್ಧವಿಹಾರದ ನಿರ್ಮಾಣಕ್ಕೆ ಕಾರಣಕರ್ತರಾಗಿದ್ದಾರೆ. 2004ರಲ್ಲಿ ಅವರು ನಿಧನ ಹೊಂದಿದ ಮೇಲೆ ಈ ಬೌದ್ಧ ನೆಲೆಯ ಜವಾಬ್ದಾರಿಯನ್ನು ಪ್ರೊ.ಮನೋರಖ್ಖಿತ ಭಂತೇಜಿ ಅವರ ಹೆಗಲಿಗೆ ಬರುತ್ತದೆ. ಇವರು ಸಹ ಜೇತವನ ಕಟ್ಟಿ ಬೆಳೆಸುವ ನಿಟ್ಟಿನಲ್ಲಿ ತಲ್ಲೀನರಾಗಿದ್ದಾರೆ. ಬೌದ್ಧಧಮ್ಮದ ಜೊತೆಗೆ ಬಡ ಹಿಂದುಳಿದ ಹಾಗೂ ದಲಿತ ಮಕ್ಕಳಿಗೆ ಶಿಕ್ಷಣ ನೀಡುವ ಸಲುವಾಗಿ ಸರ್ಕಾರಿ ನೌಕರರು, ಸರ್ಕಾರೇತರ ನೌಕರರು, ಉದ್ಯಮಿಗಳು, ಭೂಮಾಲೀಕರು ಹಾಗೂ ಹಲವು–ಹತ್ತು ಸಂಘ–ಸಂಸ್ಥೆಗಳು ಮೊದಲಾದ ಸಮಾಜ ಸೇವಕರನ್ನೊಳಗೊಂಡ ಪ್ರಬುದ್ಧ ಎಜುಕೇಷನ್ ಚಾರಿಟಬಲ್ ಟ್ರಸ್ಟ್ (ರಿ) ವಿದ್ಯಾಸಂಸ್ಥೆಯನ್ನು ಸ್ಥಾಪಿಸುವುದರ ಮೂಲಕ ಸಮಾಜಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಬುದ್ಧನ ವೈಚಾರಿಕತೆ ಪ್ರಜ್ಞೆಯನ್ನು ಸುತ್ತಮುತ್ತಲ ಹಳ್ಳಿಗಳು ಹಾಗೂ ತಾಲೋಕಿನದಾದ್ಯಂತ ಜನರಿಗೆ ತಲುಪಿಸುವ ಕಾರಣದಿಂದ ಸ್ಥಾಪಿತವಾದ ಈ ಜೇತಾವನ ಬೌದ್ಧವಿಹಾರವು ಇಂದು ಹಳ್ಳಿಯ ಜನರ ಆಚಾರ ವಿಚಾರಗಳಲ್ಲಿ ಬದಲಾವಣೆಯನ್ನು ತರುವ ಕೆಲಸವನ್ನು ಮಾಡುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಈ ಹಿನ್ನೆಲೆ ಇರುವ ಈ ನೆಲೆಗೆ ಸಾಕಷ್ಟು

ಪ್ರವಾಸಿಗರು ಬರುತ್ತಿದ್ದಾರೆ. ಅಲ್ಲದೇ ವಿದೇಶಿಯ ಪ್ರವಾಸಿಗರು ಬರುತ್ತಿದ್ದಾರೆ ಎಂಬ ಹೇಳಿಕೆಗಳಿವೆ. ಧಾರ್ಮಿಕ ಹಿನ್ನೆಲೆಯಲ್ಲಿ ಇದೊಂದು ಪ್ರಮುಖ ಬೌದ್ಧ ಧಾರ್ಮಿಕ, ಶೈಕ್ಷಣಿಕ ಅಲ್ಲದೆ ಸಾಂಸ್ಕೃತಿಕ ಕ್ಷೇತ್ರವಾಗಿ ಬೆಳೆಯುತ್ತಿದೆ. ಇದಕ್ಕೆಲ್ಲ ಇತಿಹಾಸ ಚಿಂತಕರು ಆದ ಪ್ರೊ. ಮನೋರಕ್ಖಿತ ಭಂತೇಜಿ ಅವರ ಪರಿಶ್ರಮವೇ ಇದಕ್ಕೆ ಪ್ರಧಾನ ಕಾರಣವಾಗಿದೆ.

ಜೇತವನ ಬುದ್ಧವಿಹಾರ ಚನ್ನಲಿಂಗನಹಳ್ಳಿಯಲ್ಲಿ ಪ್ರಬುದ್ಧ ಎಜುಕೇಷನ್ ಮತ್ತು ಚಾರಿಟೆಬಲ್ ಸೊಸೈಟಿ (ರಿ)ಯು ಒಂದು ವಿದ್ಯಾರ್ಥಿ ನಿಲಯಕ್ಕೆ ಸಹಕಾರಿಯಾಗಿದ್ದು, ಲೋಕಸಭಾ ಸದಸ್ಯರಾಗಿದ್ದ ಕಾಗಲವಾಡಿ ಎಂ.ಶಿವಣ್ಣ ಅವರು ಈ ಸಂಸ್ಥೆಗೆ ಐದು ಲಕ್ಷ ರೂಪಾಯಿಗಳನ್ನು ಅನುದಾನವಾಗಿ ನೀಡಿದ್ದಾರೆ. ಹಾಗೆಯೇ ಹನೂರು ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರು ಮತ್ತು ಮಾಜಿ ಸಚಿವರು ದಿವಂಗತ ಹೆಚ್.ನಾಗಪ್ಪ ಅವರ ಸ್ಮರಣಾರ್ಥವಾಗಿ ಒಂದು ಧ್ಯಾನಮಂದಿರವನ್ನು ನಿರ್ಮಾಣ ಮಾಡಲಾಗಿದೆ. ಈ ಧ್ಯಾನಮಂದಿರದಲ್ಲಿ ಬುದ್ಧನ ಶಿಲ್ಪವನ್ನು ಇರಿಸಲಾಗಿದೆ. ಮೊಟ್ಟಮೊದಲಿಗೆ ಈ ನೆಲೆಗೆ ಒಂದು ಬಂದು ಬೌದ್ಧ ನೆಲೆಯನ್ನಾಗಿ ಮಾಡಿದ ಕೀರ್ತಿ ಪ್ರೊ.ಎಂ.ಮರಿಸ್ವಾಮಿ ಅವರಿಗೆ ಸಲ್ಲುತ್ತದೆ. ಅವರು ಬದುಕಿರವವರೆಗೂ ಇಲ್ಲಿಯೇ ನೆಲೆಸಿ ಇಲ್ಲಿಯೇ ೨೦೦೬ನೇ ಡಿಸೆಂಬರ್ ೦೪ರಂದು ಪರಿನಿಬ್ಬಾಣವನ್ನು ಹೊಂದಿದರು. ಆದಕಾರಣ ಅವರ ನೆನಪಿಗಾಗಿ ಒಂದು ಸ್ಥೂಪವನ್ನು ಮಾಡಲಾಗುತ್ತಿದೆ.

ಈ ನೆಲೆ–ಹಿನ್ನೆಲೆಯಲ್ಲಿ ದೇಶ, ರಾಜ್ಯ ಮತ್ತು ಜಿಲ್ಲೆಯಲ್ಲಿರುವಂಥ ಬೌದ್ಧ ವಿಹಾರಗಳು ಹಾಗೂ ಬೌದ್ಧದೇವಾಲಯಗಳ ಮಾದರಿಯಲ್ಲಿ ಅಧ್ಯಯನ ಕ್ಷೇತ್ರವಾಗಿರುವಂಥ ಕೊಳ್ಳೇಗಾಲ ತಾಲೋಕಿನಲ್ಲಿ ಬೌದ್ಧನೆಲೆಗಳು ಪ್ರಸಾರದಲ್ಲಿ ತಮ್ಮದೇ ಆದಂಥ ಪ್ರಸ್ತುತತೆಯನ್ನು ಹೊಂದಿರುತ್ತದೆ. ಈ ಭಾಗದ ಜನರಲ್ಲಿ ಬೌದ್ಧಧಮ್ಮದ ಬಗೆಗೆ ಪ್ರಜ್ಞೆಯಿದೆ. ಆದರೆ, ವೈದಿಕ ಧರ್ಮದ ಆಡಂಬರ ಮತ್ತು ಕ್ರೈಸ್ತಧರ್ಮದ ನಾಲಿಗೆಯ ರುಚಿಯ ಪ್ರಭಾವವು ಹೆಚ್ಚಾಗಿ ಹರಡಿದೆ. ಧರ್ಮವನ್ನು ಪ್ರಸಾರಮಾಡಿ ಅರಿವನ್ನು ಮೂಡಿಸುವಂಥ ಒಂದು ಬಲಿಷ್ಠ ತಂಡವು ರಚಿತಗೊಂಡು ಕೆಲಸಮಾಡಿದ್ದೇ ಆದರೆ, ಈ ಸ್ಥಳಗಳನ್ನು ಪ್ರಸಿದ್ಧ ಬೌದ್ಧಕೇಂದ್ರಗಳಾಗಿಯೇ ಮಾರ್ಪಡಿಸುವಂಥ ಶಕ್ತಿ ಹೆಚ್ಚಿನ ರೀತಿಯಲ್ಲಿ ಬರಬೇಕಿದೆ. ಟಿಬೆಟಿಯನ್ ಮತ್ತು ಜೇತವನ ಬೌದ್ಧವಿಹಾರಗಳಿಗೆ ಸರಿಯಾದ ಮಾದರಿಯಲ್ಲಿ ಸಂಪರ್ಕವನ್ನು ಕಲ್ಪಿಸಬೇಕು. ಆವಾಗ ಧಮ್ಮದ ಬೆಳವಣಿಗೆಗೆ ಹೆಚ್ಚಿನ ರೀತಿಯಲ್ಲಿ ಸಾಧ್ಯವಾಗುತ್ತದೆ. ಇದು ಪ್ರಸ್ತುತದ ದಿನಗಳಲ್ಲಿ ನಡೆಯಬೇಕಾದಂಥ ಅನಿವಾರ್ಯತೆಯಿದೆ.

***ISSN (E):2582-225X*, VOL-1 ISSUE-6, MARCH-APRIL,2020, 33-41**

**ಪರಾಮರ್ಶನ ಗ್ರಂಥಗಳು**

1. ಡಾ.ಮೂಡ್ನಾಕೂಡು ಚಿನ್ನಸ್ವಾಮಿ, ಮರಳಿ ಮನೆಗೆ..., 2006
2. ಚಾಮರಾಜನಗರ ಜಿಲ್ಲಾ ಗ್ಯಾಸೆಟಿಯರ್, 2015
3. ಟಿಬೆಟನ್ ಬುಲೆಟಿನ್, ಮಾರ್ಚ್–ಏಪ್ರಿಲ್, 1992
4. ಮಂಗ್ಳೂರು ವಿಜಯ, ಟಿಬೆಟ್: ಅರ್ಧಶತಮಾನದ ಆರ್ತಮೊರೆ, 2005.
5. ಪ್ರೊ.ಮನೋರಕ್ಖಿತ ಭಂತೇಜಿ ಅವರ ಸಂದರ್ಶನ, ದಿನಾಂಕ: 12–02–2017